ಶ್ರೀ ಎಫ್. ಎಸ್. ತಾವರೆ.—ಡಾಕ್ಟರರು ತಹರುಗಳಲ್ಲಿ ಇರಲು ಬಯಸುತ್ತಾರೆ, ಹಳ್ಳಿಗಳಿಗೆ ಹೋಗುವುದಿಲ್ಲ. ಅವರು ಹಳ್ಳಿಗಳಿಗೆ ಹೋಗುವಂತೆ ನಿರ್ಬಂಧ ಹಾಕುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಕೆಲವು ನಿರ್ಬಂಧ ಹಾಕುತ್ತಿದ್ದೇವೆ. ಎಲ್ಲ ಡಾಕ್ಟರರನ್ನು ಪಟ್ಟಣ ದಲ್ಲಿ ಇಟ್ಟುಕೊಳ್ಳುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇಂಟಿಗ್ರೇಟೆಡ್ ಕೋರ್ಸ್ ಇಂಟ್ರಡ್ಯೂಸ್ ಮಾಡಿ ಅವರನ್ನು ನೇಮಕ ಮಾಡಲು ಇರುವ ಆಂತಕವನ್ನು ದೂರಮಾಡಿ ಅವರನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಸರಕಾರ ಅದನ್ನು ಪರಿಶೀಲನೆ ಮಾಡುತ್ತಿದೆ.

ಶ್ರೀ ಎಸ್. ಪಿ. ಹಾಯದೆ.—ಉತ್ತರಕನ್ನಡ ಜಿಲ್ಲೆಯಲ್ಲಿ ಎಷ್ಟು ದವಾಖಾನೆಗಳಿವೆ ? ಆ ಹೈಕಿ ಎಷ್ಟೆರೆಲ್ಲಿ ಡಾಕ್ಟರುಗಳಿಲ್ಲ ?

ಶ್ರೀ ಕೆ. ನಾಗಪ್ಪ ಆಳ್ವ.—ಅಲ್ಲಿ 73 ದವಾಖಾನೆಗಳಿವೆ. ಅದರ ಎಷ್ಟು ದವಾಖಾನೆಗಳಲ್ಲಿ ಡಾಕ್ಟರುಗಳಿಲ್ಲ ಎಂಬ ವಿಚಾರ ಈಗ ನನ್ನ ಬಳಿ ಇಲ್ಲ.

———

Vehicles that are out of order in P. W. D. Division, Davangere.

*Q.—432. Sri G. T. RANGAPPA (Hosadurga).—

Will the Government be pleased to state :—

(*a*) the number of vehicles that are out of order in the P. W. D. Division, Davangere and since when ;

(*b*) what they propose to do with such vehicles ;

(*c*) the amount spent for the repairs of the vehicles so far ?

A.—Sri G. B. SHANKAR RAO.—(Parliamentary Secretary to the Minister for Public Works).—

(*a*) 20 Since 3 to 10 years.

(*b*) 9 vehicles have already been auctioned. 7 vehicles are proposed to be got repaired and put into use. The remaining 4 vehicles are proposed for being disposed of in auction.

(*c*) No expenditure has been incurred so far.

ಶ್ರೀ ಜಿ. ಟಿ. ರಂಗಪ್ಪ.—ಇಲ್ಲಿ ತಿಳಿಸಿರತಕ್ಕ 7 ವಾಹನ ಕೆಟ್ಟು ಹೋಗಿ ಎಷ್ಟು ವರ್ಷಗಳು ಆಯಿತು?

ಶ್ರೀ ಜಿ. ಬಿ. ಶಂಕರರಾವ್.—3 ರಿಂದ ಹತ್ತು ವರ್ಷಗಳಾಗಿವೆ ಎಂದು ಉತ್ತರದಲ್ಲೇ ತಿಳಿಸಿದೆ.

ಶ್ರೀ ಜಿ. ಟಿ. ರಂಗಪ್ಪ.—ನಾನು ಕೇಳುತ್ತಿರುವುದು ಈ 7 ವಾಹನಗಳು ಕೆಟ್ಟು ಹೋಗಿ ಎಷ್ಟು ವರ್ಷಗಳಾಯಿತು ಎಂದು?

ಶ್ರೀ ಜಿ. ಬಿ. ಶಂಕರರಾವ್.—ಪ್ರತಿಯೊಂದು ವಾಹನವೂ ಕೆಟ್ಟು ಹೋಗಿ ಎಷ್ಟು ವರ್ಷ ಗಳಾದುವೆಂಬುದನ್ನು ತಿಳಿಸುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ಸರ್ಕಾರದವರು ಕೊಟ್ಟಿರತಕ್ಕ ಉತ್ತರದಲ್ಲಿ 9 ವೆಹಿಕಲ್ಲನ್ನು ಹರಾಜು ಮಾಡಲಾಯಿತು. ಇನು 7 ವೆಹಿಕಲ್‌ಗಳನ್ನು ರಿಪೇರಿ ಮಾಡಬೇಕೆಂದಿದೆ. ಇನ್ನುಳಿದ 4ನ್ನು ಹರಾಜು ಮೂಲಕ ವಿಲೇವಾರಿ ಮಾಡಬೇಕೆಂದಿದೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಈ ರೀತಿ ಸಿಕ್ಕಾಗಿರತಕ್ಕ ವೆಹಿಕಲ್‌ಗಳಿಂದ ಸರ್ಕಾರಕ್ಕೆ ಬಹಳ ಹಣ ದುರುಪಯೋಗವಾಗುತ್ತಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ!

ಶ್ರೀ ವೀರೇಂದ್ರ ಪಾಟೀಲ್ (ರೋಣ).—ಈ ರೀತಿ ಅನೇಕ ಕಡೆಗಳಲ್ಲಿ ಆಗಿದೆ. ನಮ್ಮ ಪ್ರಾಜೆಕ್ಟ್‌ಗಳನ್ನು ನಾನಾ ಕಡೆಗಳಲ್ಲಿ ಕಟ್ಟುವಕ್ಕೆ ಸಂಬಂಧದಲ್ಲಿ ನಾವು ಅನೇಕ ತರಹೆಯ ಮೆಷಿನರಿಗಳನ್ನು ಇಟ್ಟುಕೊಂಡಿದ್ದೇವೆ. ಅವುಗಳಲ್ಲಿ ಲಾರಿಗಳಿವೆ, ರೋಡ್ ರೋಲರುಗಳಿವೆ ಇನ್ನೂ ಅನೇಕ ರೀತಿಯ ಯಂತ್ರೋಪಕರಣಗಳಿವೆ. ಅವುಗಳಲ್ಲಿ ಕೆಲವು ಸಿಕ್ಕಾಗಿವೆ, ಕೆಲವು ಔಟ್ ಆಫ್ ಆರ್ಡರಾಗಿವೆ. ಅದಕ್ಕಾಗಿ ನಾವು ಒಂದು ಪ್ರತ್ಯೇಕವಾದ ಆರ್ಗನೈಜೇಷನ್ನೇ ಮಾಡಿ ಇವುಗಳ ರಿಪೇರಿಗಾಗಿ ಸೆಂಟ್ರಲ್ ಮತ್ತು ರೀಜನಲ್ ವರ್ಕ್‌ಷಾಪ್‌ಗಳನ್ನು ಮಾಡಿರುತ್ತೇವೆ. ರಿಪೇರಿ ಮಾಡತಕ್ಕಂಥವುಗಳನ್ನು ಅಲ್ಲಿ ರಿಪೇರಿ ಮಾಡಲಾಗುತ್ತದೆ ಹಾಗೆ ರಿಪೇರಿ ಮಾಡುವುದ ಕ್ಕಾದ್ದನ್ನು ಸ್ಕ್ರೇಪಗಾಗಿ ಬಳೆಸಲು ಅದಕ್ಕೊಂದು ಸಮಿತಿಯನ್ನು ಮಾಡಲಾಗಿದೆ. ಆ ಅಡಹಾಕ ಸಮಿತಿಯವರು ಅದನ್ನು ನೋಡಿಕೊಳ್ಳುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮಾನ್ಯ ಮಂತ್ರಿಗಳು ರೀಜನಲ್ ಸಮಿತಿಗಳನ್ನು ಮಾಡ ಲಾಗಿದೆ ಎಂತ ಅಪ್ಪಣೆ ಕೂಡಿಸಿದರು. ಅಲ್ಲಿ ಬೇಕಾಗತಕ್ಕ ಸಲಕರಣೆಗಳನ್ನೆಲ್ಲಾ ಅಲ್ಲಿಗೆ ಒದಗಿಸಿಕೊಟ್ಟಿ ದ್ದಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಈಗ ಅಗತ್ಯವಿರುವುದನ್ನು ಒದಗಿಸಿದ್ದೇವೆ ಸಾಲದೆ ಬಂದಲ್ಲಿ ಅದನ್ನು ಪುನಃ ಹೆಚ್ಚು ಮಾಡೋಣ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಒಳ್ಳೆಯ ರಸ್ತೆಯ ಪಕ್ಕದಲ್ಲೇ ಬಹಳ ದಿವಸಗಳಿಂದಲೂ ಕ್ಯಾನಿಕ್ಕಾಗಿ ಡಿನಾರ್ಡರಾಗಿ ಬಿದ್ದಿರುತ್ತವೆ. ಅವುಗಳಲ್ಲಿ ರೋಡ ರೋಲರುಗಳೂ ಇವೆ ತುಕ್ಕು ಹಿಡಿ ದಿರತಕ್ಕ ಲಾರಿಗಳಿವೆ ಇವುಗಳನ್ನು ಹರಾಜು ಹಾಕುವುದಕ್ಕೆ ಎಗ್ಜಿಕ್ಯುಟೀವ್ ಇಂಜಿನಿಯರು ಆಜ್ಞೆ ಮಾಡುತ್ತಿಲ್ಲ. ಹೀಗಾಗಿ ಸರ್ಕಾರಕ್ಕೆ ಈ ಇಲಾಖೆಯಿಂದ ಬಹಳ ಹಣ ಲುಕ್ಸಾನಾಗುತ್ತಿದೆ ಎಂಬುದು ಗೊತ್ತಿಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ನಾನಾಗಲೇ ಹೇಳಿದೆ. ಅದರ ಬಗ್ಗೆ ಸರ್ಕಾರದವರು ಒಂದು ಅಡ ಹಾಕ್ ಸಮಿತಿಯನ್ನು ಮಾಡಿದ್ದಾರೆ. ಅವರು ಯಾವುದನ್ನು ರಿಪೇರಿ ಮಾಡುವುದಕ್ಕೆ ಸಾಧ್ಯ ಯಾವುದು ಸಾಧ್ಯವಿಲ್ಲ ಎಂಬುದನ್ನು ಪರಿಶೀಲನೆ ಮಾಡುತ್ತಾರೆ. ಸಾಮಾನ್ಯವಾಗಿ ರೋಡ್‌ರೋಲರ್ ಎಂಜೆನ್ ಚೆನ್ನಾಗೇ ಇರುತ್ತವೆ. ಹಾಗೊಂದ ವೇಳೆ ಅದು ತೀರಾ ಕಟ್ಟಿದ್ದರೆ ಅದರ ಚಕ್ರಗಳನ್ನು ತೆಗೆದು ಅವುಗಳನ್ನು ಬೇರೆ ಕೆಲಸಕ್ಕೆ ಉಪಯೋಗಿಸಬಹುದು. ಶಿವಮೊಗ್ಗಾದಲ್ಲಿ ಹೀಗೆ ಇದನ್ನು ರಿಪೇರಿ ನಡೆಸತಕ್ಕ ಕೆಲಸ ನಡೆಯುತ್ತಿದೆ. ಈ ರೋಡ್ ರೋಲರುಗಳು ಸಿಕ್ಕುವುದು ಬಹಳ ಕಷ್ಟ ಸಾಧ್ಯವಾದ ಮಟ್ಟಿಗೂ ಅದನ್ನು ರಿಪೇರಿ ಮಾಡುವುದಕ್ಕೆ ಪ್ರಯತ್ನಪಡುತ್ತೇವೆ. ಸಾಧ್ಯವಿಲ್ಲವೆಂದು ಕಂಡು ಬಂದಾಗ ಅದನ್ನು ಸ್ಕ್ರೇಪಗೆ ಬಳಸಲು ಅದಕ್ಕೆ ಸಮಿತಿ ಇದೆ. ಅದು ಅದನ್ನು ನೋಡಿ ಕೊಳ್ಳುವುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಯಂತ್ರಗಳನ್ನು ತೆಗೆದುಕೊಂಡ ತಾರೀಖಿನಿಂದ ಇಲ್ಲಿಯವರಿ ಗೇನೂ ಇವುಗಳಿಗೆ ಖರ್ಚನ್ನೇ ಮಾಡುತ್ತಿಲ್ಲವೆಂದು ಹೇಳುತ್ತೀರಾ?

ಶ್ರೀ ಜಿ. ಬಿ. ಶಂಕರರಾವ್.—ಕೆಲವು ಯಂತ್ರಗಳು ಔಟ್ ಆಫ್ ಆರ್ಡರ್ ಆದರೂ ಯಾವ ಕೆಲಸಕ್ಕೂ ಹರಕತ್ತಾಗಿಲ್ಲ ಎಂದು ಹೇಳಿದೆ.

Sri C. J. MUCKANNAPPA.—I think the Minister says something and the Parliamentary Secretary says something. I wanted to know definitely whether since the date of purchase of these vehicles, any repairs have been effected to these vehicles. He says no vehicles went out of order.

Sri G. B. SHANKAR RAO.—I do not say no vehicles went out of order.

Mr. SPEAKER.–There is a demand which comes up for consideration.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ನಾನು 4—5 ಸಾರ್ತಿ ಒಂದೇ ಸಮನಾಗಿ ಎದ್ದು ನಿಲ್ಲುತ್ತಿದ್ದೇನೆ. ನನಗೆ ಅವಕಾಶವೇ ಸಿಕ್ಕಲಿಲ್ಲ.

ಅಧ್ಯಕ್ಷರು.—ನಾನು ಎಷ್ಟು ಕಡೆ ನೋಡಬೇಕು? ಒಂದು ಪ್ರಶ್ನೆಯನ್ನು ಎಷ್ಟು ಕಾಲ ಚರ್ಚೆ ಮಾಡಬಹುದು? ಪ್ರತಿಯೊಂದು ಪ್ರಶ್ನೆಯಮೇಲೂ ಪ್ರತಿಯೊಬ್ಬ ಸದಸ್ಯರಿಗೂ ಉಪಪ್ರಶ್ನೆ ಹಾಕುವು ದಕ್ಕೆ ಅವಕಾಶ ಕೊಡಬೇಕಾದರೆ ನಾವು ಈ ಪ್ರಶ್ನೆಗಳನ್ನೆಲ್ಲಾ ಮುಗಿಸುವುದಕ್ಕೆ ಸಾಧ್ಯವೇ? ಇದೆಲ್ಲ ವನ್ನೂ ಆರೋಚನೆ ಮಾಡುವುದು ಬೇಡವೇ?

ಶ್ರೀ ಬಿ. ಬೈರಪ್ಪಾಜಿ.—ಹಾಗಾದರೆ ನನಗೆ ಒಂದು ಸಪ್ಲಿಮೆಂಟರಿಯನ್ನಾದರೂ ಹಾಕಲು ಅವಕಾಶ ಬೇಡವೇ?

ಅಧ್ಯಕ್ಷರು.—ಪ್ರತಿಯೊಬ್ಬರಿಗೂ ಅವಕಾಶ ಸಿಕ್ಕಬೇಕೆಂದರೆ ಅದು ಸಾಧ್ಯವಾಗುವುದಿಲ್ಲ. ಈಗಾಗಲೇ ಈ ಚರ್ಚೆಯಲ್ಲಿ 15 ನಿಮಿಷ ಕಳೆಯಿತು.

Construction of a Road from Herurgate to Kundur Gate.

*Q.—433. **Sri G. T. RANGAPPA.**—(Hosadurga).—

Will the Government be pleased to state :—

(*a*) whether an estimate for the construction of a road from Herurgate (H. H. Road) to Kundur gate *via* Hebballi route in Hosadurga Taluk has been prepared ;

(*b*) if so, the estimated cost of the same ;

(*c*) the action taken so far in this behalf ?

A.—**Sri G. B. SHANKAR RAO** (Parliamentary Secretary to Minister for Public Works).—

(*a*) No.

(*b*) and (*c*) Do not arise in view of reply to clause (*a*).

ಶ್ರೀ ಜಿ. ಟಿ. ರಂಗಪ್ಪ.—ಈಗ ಈ ಕೆಲಸದ ಬಗ್ಗೆ ಅಂದಾಜು ತಯಾರಾಗಿ 21 ಸಾವಿರಕ್ಕೆ ಸರ್ಕಾರದ ಮಂಜೂರಾತಿಗೆ ಬಂದಿದೆಯೆಂದು ತಿಳಿಯುತ್ತೇನೆ, ಇದು ನಿಜವೇ ?

ಶ್ರೀ ಜಿ. ಬಿ. ಶಂಕರರಾವ್.—ಆ ಬಗ್ಗೆ ಸಂಬಂಧಪಟ್ಟ ಕಾಗದಪತ್ರಗಳ್ಯಾವೂ ಈಗ ನನ್ನಲ್ಲಿಲ್ಲ

ಶ್ರೀ ಎಚ್. ಆರ್. ಕೇಶವಮೂರ್ತಿ.—ಅಂದಾಜುಗಳು ತಯಾರಾಗುವುದಕ್ಕೆ ಮುಂಚಿತವಾಗಿಯೇ ಕೆಲಸಗಳನ್ನು ಪ್ರಾರಂಭಮಾಡಿ, ಆ ನಂತರ ಅಂದಾಜುಗಳನ್ನು ತಯಾರಿಸಿರತಕ್ಕದ್ದರ ಬಗ್ಗೆ ಇದುವರೆಗೆ ಸರ್ಕಾರಕ್ಕೆ ಎಷ್ಟು ಹಣವನ್ನು ಹಾಳುಮಾಡಲಾಗಿದೆ ?

ಶ್ರೀ ಜಿ. ಬಿ. ಶಂಕರರಾವ್.—ಅಂದಾಜುಗಳು ತಯಾರಾಗುತ್ತವೆ. ಆದರೆ ಹಣದ ಅನುಕೂಲತೆ ನೋಡಿಕೊಂಡು ಕೆಲಸವನ್ನು ಪ್ರಾರಂಭಮಾಡುತ್ತೇವೆ. ಆದ್ದರಿಂದ ಅಂದಾಜು ತಯಾರಿಸುವ ಬಗ್ಗೆ ಖರ್ಚಾದ ಹಣವೇನೂ ವ್ಯರ್ಥ ಖರ್ಚಾಗುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಸದಸ್ಯರು ಹೊಸದುರ್ಗ ತಾಲ್ಲೂಕಿನಲ್ಲಿ ಅಂದಾಜು ತಯಾರಾಗುವುದಕ್ಕೆ ಮುನ್ನ ಕೆಲಸ ನಡೆದಿದೆ ಎಂಬುದಾಗಿ ಒಂದು ಪ್ರಶ್ನೆಯನ್ನು ತಂದಿದ್ದರೆ ಮಾನ್ಯ ಮಂತ್ರಿಗಳು ಅಂದಾಜು ಇನ್ನು ತಯಾರಾಗಿಲ್ಲ ಎಂದು ಹೇಳುತ್ತಿದ್ದಾರೆ. ಹೀಗಿರುವುದರಿಂದ ಇಲ್ಲಿ ಹಾಕಿರತಕ್ಕ ಪ್ರಶ್ನೆ ಸರಿಯಾಗಿದೆಯೋ ಅಥವಾ ಕೊಡತಕ್ಕ ಉತ್ತರ ಸರಿಯಾಗಿಲ್ಲವೋ ಇದರಲ್ಲಿ ಯಾವುದು ಸರಿ ?

Sri G. B. SHANKAR RAO.—I have answered correctly.

Mr. SPEAKER.—Member's knowledge is different. The Minister's papers are different. Naturally there is bound to be difference. How can the Member know about the estimates? Are papers submitted to Members or to the Ministers ? That is not a proper supplementary.

ಶ್ರೀ ಬಿ. ಎಲ್. ಗೌಡ.—ಹೊಸದುರ್ಗ ತಾಲ್ಲೂಕಿನಲ್ಲಿ ಪಿ. ಡಬ್ಲ್ಯು. ಡಿ. ರಸ್ತೆ ಉದ್ದ ಎಷ್ಟಿದೆ ?

Sri G. B. SHANKAR RAO.—He must ask a separate question. If a separate question is put, I can answer.

Mr. SPEAKER.—The Hon'ble Parliamentary Secretary must say Notice.